ಸಿ.ಸಿ .ನಂ. 106/2023 ಪಿಡಬ್ಲೂಃ 1

ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನನ್ನ ತಾಯಿಯ ಮನೆ ದೇವರಹಕ್ಕಲ, ಕುಮಟಾ . ಇಂದು , ವಸೂದಾ , ಮಂಜುಳಾ , ನಾಗವೇಣಿ , ಗೀತಾ ಇವರು ಯಾರು ಗೊತ್ತಿಲ್ಲ. 2014 ರ ಸಂದರ್ಭದಲ್ಲಿಯೂ ಗೊತ್ತಿಲ್ಲ. ನನ್ನ ಮದುವೆ 2007 ರಲ್ಲಿ ಆಗಿರುತ್ತದೆ . ನಮ್ಮ ತಾಯಿಯ ಮನೆಯಲ್ಲಿ ಪಕ್ಕದ ಮನೆಯಲ್ಲಿ ಯಶೋಧಾ ರವರ ಮನೆ ಇದೆ . ಮನೆಯ ಪಕ್ಕದಲ್ಲಿ ಗೀತಾ ಭಂಡಾರಿಯವರು ಇರಬಹುದು . ನನಗೆ ಪರಿಚಯ ಇಲ್ಲ. ನಾನು , ವಸೂದಾ, ಗೀತಾ ಮತ್ತು ಮಹಾದೇವಿ ನನಗೆ ಪರಿಚಯ ಇಲ್ಲ . ಇಂದು ನನ್ನ ಚಿಕ್ಕಪ್ಪನ ಮಗಳು . ಸುಲೋಚನಾ ನನ್ನ ಅಕ್ಕ . ನಾವೆಲ್ಲರೂ ಸೇರಿ ಯಾವತ್ತೂ ಸಂಘ ಮಾಡಿಲ್ಲ ಹಾಗೂ ಯಾವತ್ತೂ ಸೇರಿ ಹಣವನ್ನು ಹಾಕಿಲ್ಲ . ಮೇಲೆ ಹೇಳಿದ ಎಲ್ಲರ ವಿಳಾಸ ದೇವರಹಕ್ಕಲು ಎಂದರೆ ಗೊತ್ತಿಲ್ಲ. ನಾವೆಲ್ಲರೂ ಸೇರಿ 2014 ರಿಂದ ಚಿಟಫಂಡ್ ನಡೆಸುವ ಸಂಘ ಇಟ್ಟುಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಪ್ರತಿ ತಿಂಗಳು ಒಂದು ಸಭೆಯನ್ನು ಮಾಡುತ್ತಿದ್ದೆವು ಹಾಗೂ ಆ ತಿಂಗಳಲ್ಲಿ ಯಾರಿಗೆ ಸಾಲವನ್ನು ಕೊಟ್ಟ ಬಗ್ಗೆ ಠರಾವನ್ನು ಮಾಡುತ್ತಿದ್ದವು ಎಂದರೆ ಸರಿಯಲ್ಲ . ಹುಟ್ಟುದಾಗಿನಿಂದ ಈಲ್ಲಿಯವರೆಗೂ ನನಗೆ ದೇವರಹಕ್ಕಲ ಬಗ್ಗೆ ಮಾಹಿತಿ ಇದೆ ಎಂದರೆ ಸರಿ . 2014 ರ ನಂತರ ಕುಮಟಾ ಅರ್ಬನ್ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ಶಿರಸಿ ಅರ್ಬನ್ ಬ್ಯಾಂಕ ಹಾಗೂ ಎಸ್ ಬಿ ಐ ಬ್ಯಾಂಕನಲ್ಲಿ ಜೊಯಿಂಟ್ ಅಕೌಂಟ್ ಹೊಂದಿದ್ದೇನೆ . 2019 ರಲ್ಲಿ ನನ್ನದು ಯಾವ ಯಾವ ಬ್ಯಾಂಕನಲ್ಲಿ ಸಾಲದ ಖಾತೆ ಇತ್ತು ಎಂದರೆ ನೆನಪಿಲ್ಲ. ಶಿರಸಿ ಅರ್ಬನ್ ಬ್ಯಾಂಕನಲ್ಲಿ ನನ್ನ ಯಾವುದೇ ಲೋನ್ ಇಲ್ಲ . ನನ್ನದು ಇಲ್ಲಿಯವರೆಗೆ ಯಾವುದೇ ಬ್ಯಾಂಕನಲ್ಲಿ ಸಾಲ ಇಲ್ಲ. ಕೆನರಾ ಸಾರಸತ್ವ ಕ್ರೆಡಿಟ್ ಸೌಹಾರ್ದ ಬ್ಯಾಂಕನ ಹೆಸರನ್ನು ಕೇಳಿದ್ದೇನೆ.

ಸದರಿ ಬ್ಯಾಂಕನಲ್ಲಿ ನಾನು ಯಾವುದೇ ಸಾಲವನ್ನು ಪಡೆದಿಲ್ಲ . ಆ ಬ್ಯಾಂಕನಲ್ಲಿ ನನ್ನ ಪ್ರತ್ಯೇಕ ನಾಲ್ಕು ಬಂಗಾರದ ಆಭರಣಗಳನ್ನು ಇಟ್ಟ ಸಾಲ ಇತ್ತು ಎಂದರೆ ಸರಿಯಲ್ಲ.

4. ನಾಗವೇಣಿ ಪಾಂಡುರಂಗ ನಾಯ್ಕ ಇವರ ಮನೆ ನಮ್ಮ ತಾಯಿಯ ಮನೆಯಿಂದ ಎಷ್ಟು ದೂರವಾಗುತ್ತದೆ ಗೊತ್ತಿಲ್ಲ. ನನ್ನದು ಕೆನರಾ ಸಾರಸತ್ವ ಬ್ಯಾಂಕನಲ್ಲಿ ಒಟ್ಟೂ 9,24,000/- ರೂಪಾಯಿ ಸಾಲ ಇತ್ತು ಎಂದರೆ ಸರಿಯಲ್ಲ. ನಾನು ಹಾಗೂ ನಾಗವೇಣಿ ಅದೇ ಬ್ಯಾಂಕಿನಲ್ಲಿ ಬಂಗಾರ ಅಡವಿಟ್ಟು ಸಾಲವನ್ನು ಪಡೆಯುತ್ತಿದ್ದೆವು ಎಂದರೆ ಸರಿಯಲ್ಲ. ಕೆನರಾ ಸಾರಸತ್ವ ಬ್ಯಾಂಕನಿಂದ ವಿಚಾರಣೆಗಾಗಿ ನನಗೆ ಯಾವುದೇ ನೋಟಿಸು ಬಂದಿಲ್ಲ. ಮಂಜುಳಾ ನಾಗರಾಜ ನಾಯ್ಕ ಎಂದರೆ ನಾನೇ ಎಂದರೆ ಸರಿ . ಆ ಬ್ಯಾಂಕಿನ ಶರಾಫರಾದ ದಿನೇಶ ರತ್ನಾಕರ ಶೇಟ್ , ನನಗೆ ಹಾಗೂ ನಾಗವೇಣಿ ಪಾಂಡುರಂಗ ನಾಯ್ಕ ರವರಿಗೆ ಬ್ಯಾಂಕಿಗೆ ವಂಚಿಸಿದ ಸಂಬಂಧ ನೋಟಿಸು ಬಂದಿತ್ತು ಎಂದರೆ ಸರಿಯಲ್ಲ.

5. ಜಾಯಿಂಟ್ ಅಕೌಂಟ್ ನಿಂದ ಹಣವನ್ನು ಪಡೆಯುವಾಗ ನಾನು ನನ್ನ ಗಂಡನ ಸಮ್ಮತಿಯನ್ನು ಪಡೆದಿದ್ದೇನೆ. ನಿನ್ನ ಫ್ರೆಂಡ್ ನೀನು ನೋಡಿಕೊ ಎಂದು ನನ್ನ ಗಂಡ ಹೇಳಿದ್ದರು . ಈ ಪ್ರಕರಣದಲ್ಲಿ ನನ್ನ ಗಂಡನ ಸಾಕ್ಷವನ್ನು ಮಾಡಲು ಆಗುವುದಿಲ್ಲ, ಅವರು ಬರುವುದಿಲ್ಲ. ಅವರ ಹಣವನ್ನು ನಾನು ಆರೋಪಿಗೆ ಕೊಟ್ಟಿದ್ದೇನೆ ಎಂದು ಹೇಳಿರುವುದರಿಂದ ನನ್ನ ಗಂಡನ ವಿಚಾರಣೆ ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಒಂದಾನುವೇಳೆ ನಮ್ಮ ಮನೆಯವರು ಬಂದರೆ ಆರೋಪಿಗೆ ಹಣ ಕೊಟ್ಟಿಲ್ಲ ಎಂಬ ನಿಜ ಸಂಗತಿ ಹೇಳುತ್ತಾರೆ ಅಲ್ಲದೇ ಆರೋಪಿಯ ಮೇಲೆ ದಾಖಲಿಸಿರುವ ಪ್ರಕರಣ ಸುಳ್ಳು ಎಂದು ಹೇಳುತ್ತಾರೆ , ಆ ಕಾರಣ ನನ್ನ ಮನೆಯವರನ್ನು ವಿಚಾರಣೆ ಮಾಡಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿಡಬ್ಲೂಃ 1

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.